<u>2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .</u>

SC. No.40-2024

ದೋ.ಸಾ. 9
ಫ್ರಾ.ಸಾ. 8
ಪ್ರ.ವ.ಬೊ.ದಿನಾಂಕ. 21-02-2026

| | | |
|---|---|---|
| ಹೆಸರು ಶ್ರೀ/ ಶ್ರೀ ಮತಿ. | - | ಡಾ.ವೇದಮೂರ್ತಿ |
| ತಂದೆ / ಗಂಡನ ಹೆಸರು | - | ಬಸಪ್ಪ ಜಿ |
| ವಯಸ್ಸು | - | 50 |
| ಉದ್ಯೋಗ | - | ವೈದ್ಯಾಧಿಕಾರಿಗಳು ಸಿಜಿ ಆಸ್ಪತ್ರೆ, ದಾವಣಗೆರೆ |
| ವಾಸ ಸ್ಥಳ | - | ದಾವಣಗೆರೆ |

ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

ನಾನು ಕಳೆದ ನಾಲ್ಕು ವರ್ಷಗಳಿಂದ ದಾವಣಗೆರೆಯ ಚಿಗಟೇರಿ ಜಿಲ್ಲಾ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 02-01-2024 ರಂದು ಮದ್ಯಾಹ್ನ 3-03 ನಿಮಿಷದ ಅವಧಿಯಲ್ಲಿ ಪ್ರವೀಣ ಶರ್ಮ ಎನ್ನುವ 34 ವರ್ಷ ಪ್ರಾಯದ ಮಹಿಳೆಯು ತನ್ನ ಮೇಲೆ ತನ್ನ ಭಾವ ಹಲ್ಲೆ ಮಾಡಿದ್ದಾನೆ ಎನ್ನುವ ಇತಿಹಾಸದಲ್ಲಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದು, ಅವಳನ್ನು ಪರೀಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡುಬಂದಿರುತ್ತವೆ.

1. ಆಕೆಯ ಬಲಕಣ್ಣಿನ ಮೇಲೆ ಗುದ್ದಿದ ಗಾಯ ಕಂಡುಬಂದಿರುತ್ತದೆ.
2. ಆಕೆಯ ಬೆನ್ನಿನ ಹಿಂದುಗಡೆ 7X1 ಸೆಂಮೀ ತರಚಿದ ಗಾಯ ಕಂಡುಬಂದಿರುತ್ತದೆ.
3. ಅಲ್ಲದೇ ಆಕೆಯ ಎಡಕೈ ಮೇಲೆ 1X 1 ಸೆಂಮೀ ಗಾತ್ರದ ತರಚಿದ ಗಾಯ ಕಂಡುಬಂದಿರುತ್ತದೆ.

ನನ್ನ ಅಭಿಪ್ರಾಯದಲ್ಲಿ ಸದರಿ ಗಾಯಗಳು ಸಾದಾ ಸ್ವರೂಪದ ಗಾಯಗಳಾಗಿದ್ದು, ನಂತರ ತನಿಖಾಧಿಕಾರಿಯು ಗಾಯಾಳುವಿನ ಗಾಯದ ಪ್ರಮಾಣ ಪತ್ರ ಕೋರಿಕೊಂಡಿದ್ದು, ನಾನು ನಮ್ಮ ಆಸ್ಪತ್ರೆಯ ದಾಖಲೆಯನ್ನು ಪರಿಶೀಲಿಸಿ ನಿ.ಪಿ.23 ರಂತೆ ನನ್ನ ವರದಿಯನ್ನು ನೀಡಿರುತ್ತೇನೆ. ನಿ.ಪಿ.23 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.23(ಬಿ) ಎಂದು ಗುರುತಿಸಲಾಯಿತು.

ಅಲ್ಲದೇ ಅದೇ ಸಮಯದಲ್ಲಿ ವಿವೇಕ ಎನ್ನುವ 36 ವರ್ಷ ಪ್ರಾಯದ ಪುರುಷನು ಕೂಡ ತನ್ನ ಮೇಲೆ ತನ್ನ ಅಣ್ಣ ಹಲ್ಲೆ ಮಾಡಿದ್ದಾನೆ ಎನ್ನುವ ಇತಿಹಾಸದಲ್ಲಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದು, ಅವನನ್ನು ಪರೀಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡುಬಂದಿರುತ್ತವೆ.

1. ಅವನ ಬಲ ಅಂಗೈ ಮೇಲೆ ಚರ್ಮ ಹರಿದ ರೀತಿಯ ಗಾಯ ಕಂಡುಬಂದಿರುತ್ತದೆ.

ನನ್ನ ಅಭಿಪ್ರಾಯದಲ್ಲಿ ಸದರಿ ಗಾಯಗಳು ಸಾದಾ ಸ್ವರೂಪದ ಗಾಯಗಳಾಗಿದ್ದು, ನಂತರ ತನಿಖಾಧಿಕಾರಿಯು ಗಾಯಾಳುವಿನ ಗಾಯದ ಪ್ರಮಾಣ ಪತ್ರ ಕೋರಿಕೊಂಡಿದ್ದು, ನಾನು ನಮ್ಮ ಆಸ್ಪತ್ರೆಯ ದಾಖಲೆಯನ್ನು ಪರಿಶೀಲಿಸಿ

ನಿ.ಪಿ.24 ರಂತೆ ನನ್ನ ವರದಿಯನ್ನು ನೀಡಿರುತ್ತೇನೆ. ನಿ.ಪಿ.24 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.24(ಬಿ) ಎಂದು ಗುರುತಿಸಲಾಯಿತು.

ತದನಂತರ ದಿಃ 08-02-2024 ರಂದು ತನಿಖಾಧಿಕಾರಿಯು ಮು.ಮಾ.1 ನ್ನು ಹಾಗೂ ರಾಸಾಯನಿಕ ವಿಶ್ಲೇಷಣಾ ವರದಿಗಳನ್ನು ಹಾಜರುಪಡಿಸಿ ನಿ.ಪಿ.23 ಮತ್ತು 24 ರಲ್ಲಿ ಆದ ಗಾಯಗಳು ಮು.ಮಾ.1 ರಿಂದ ಹಲ್ಲೆ ಮಾಡಿದಾಗ ಆಗಬಹುದೇ ಎಂದು ಕೋರಿಕೊಂಡಿದ್ದು, ನಾನು ಈಗ ನೋಡುತ್ತಿರುವ ಮು.ಮಾ.1 ನ್ನು ಪರಿಶೀಲಿಸಿ ಅದರಿಂದ ಹಲ್ಲೆ ಮಾಡಿದರೆ ನಿ.ಪಿ.23 ರ 2 ಮತ್ತು 3 ನೇ ಗಾಯ ಹಾಗೂ ನಿ.ಪಿ.24 ರ 1 ನೇ ಗಾಯ ಆಗಬಹುದು ಎಂದು ನನ್ನ ಪ್ರಮಾಣ ಪತ್ರ ನಿ.ಪಿ.26 ರಂತೆ ಸಲ್ಲಿಸಿರುತ್ತೇನೆ. ನಿ.ಪಿ.26 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.26(ಬಿ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದ.**

ಫ್ರಾ.ಸಾ.1 ಮತ್ತು 2 ರವರು ಇಬ್ಬರು ವೈದ್ಯರಿದ್ದು, ಅವರ ಪರಿಚಯ ನನಗೆ ಮೊದಲಿನಿಂದ ಇತ್ತು ಎಂದರೆ ಸರಿಯಲ್ಲ. ಅವರಿಬ್ಬರಿಗೂ ಯಾವುದೇ ಗಾಯಗಳು ಆಗದೇ ಇದ್ದರೂ ಕೂಡ ಅವರಿಬ್ಬರು ನನಗೆ ಪರಿಚಯ ಇದ್ದ ಕಾರಣ ನಿ.ಪಿ.23 ಮತ್ತು 24 ನ್ನು ಪೋಲೀಸರಿಗೆ ನೀಡಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.24 ರಲ್ಲಿ ಸಮಯದ ತಿದ್ದುಪಡಿ ಆಗಿದೆ ಎಂದರೆ ಸರಿ. ನಾನು ವೈಯಕ್ತಿಕವಾಗಿ ಮು.ಮಾ.1 ನ್ನು ಪರಿಶೀಲನೆ ಮಾಡಿಲ್ಲ ಎಂದರೆ ಸರಿಯಲ್ಲ. ನಿ.ಪಿ.23 ರಲ್ಲಿ ಹಲ್ಲೆ ಆದ ವೇಳೆ 1.40 ಎಎಂ ಎಂದು ನಮೂದಿಸಲಾಗಿದೆ ಎಂದರೆ ಸಾಕ್ಷಿಯು ಅದು ಕಣ್ತಪ್ಪಿನಿಂದ ಆಗಿದೆ ಎಂದು ನುಡಿದಿರುತ್ತಾರೆ. ಮಚ್ಚಿನಿಂದ ಹಲ್ಲೆ ಮಾಡಿದರೆ ನಿ.ಪಿ.26 ರಲ್ಲಿ ಹೇಳಿದ ಪ್ರಕಾರ ಗಾಯಗಳು ಆಗುವ ಸಾಧ್ಯತೆ ಇಲ್ಲ ಎಂದರೆ ಸರಿಯಲ್ಲ. ನಿ.ಪಿ.26 ರಲ್ಲಿ ಮು.ಮಾ.1 ಯಾವ ಪ್ರಕಾರವಾಗಿ ಸೀಲು ಮಾಡಲಾಗಿತ್ತು ಎಂದು ನಮೂದಿಸಿಲ್ಲ ಎಂದರೆ ಸರಿ. ಮು.ಮಾ.1 ನ್ನು ಪರಿಶೀಲಿಸಲು ಒಂದು ತಿಂಗಳು 10 ದಿನಗಳ ವಿಳಂಬವಾಗಿದೆ ಎಂದರೆ ಸರಿ. ಸದರಿ ವಿಳಂಬದ ಸಮಯದಲ್ಲಿ ಮು.ಮಾ.1 ಯಾರ ಸುಪರ್ದಿಯಲ್ಲಿ ಇತ್ತು ಎಂದು ನಿ.ಪಿ.25 ರಲ್ಲಿ ನಮೂದಿಸಲಾಗಿಲ್ಲ ಎಂದರೆ ಸರಿ. ಫ್ರಾ.ಸಾ.7 ರವರು ನನಗೆ ಯಾವುದೇ ಚೈನ್ ಆಪ್ ಕಸ್ಟಡಿ ಫಾರ್ಮ್ ಅನ್ನು ನೀಡಿದ್ದು ಇರುವುದಿಲ್ಲ. ನಿ.ಪಿ.26 ರಲ್ಲಿ ಮು.ಮಾ.1 ಹರಿತವಾಗಿತ್ತೆ ಇಲ್ಲವೇ ಎನ್ನುವುದನ್ನು ನಮೂದಿಸಿಲ್ಲ ಎಂದರೆ ಸರಿ. ಅಲ್ಲದೇ ನಿ.ಪಿ.26 ರಲ್ಲಿ ಮು.ಮಾ.1 ರ ಕಚ್ಚಾ ಚಿತ್ರಣ ಕೂಡ ಮಾಡಿಲ್ಲ ಎಂದರೆ ಸರಿ. ನನ್ನ ಸಮಕ್ಷಮ ನಿ.ಪಿ.14 ನ್ನು ಹಾಜರುಪಡಿಸಲಾಗಿರಲಿಲ್ಲ ಎಂದರೆ ಸರಿ. ಫ್ರಾ.ಸಾ.1 ಮತ್ತು 2 ರವರು ನನಗೆ ಪರಿಚಯ ಇದ್ದ ಕಾರಣ ಅವರಿಗೆ ಸಹಾಯವಾಗಲು ನಿ.ಪಿ.23 ಮತ್ತು 24 ನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .

SC. No.40-2024

ದೋ.ಸಾ. 15

ಫ್ರಾ.ಸಾ. 7

ಪ್ರ.ವ.ಬೊ.ದಿನಾಂಕ. 21-02-2026

| | | |
|---|---|---|
| ಹೆಸರು ಶ್ರೀ/ ಶ್ರೀ ಮತಿ. | - | ಮಾಳವ್ವ |
| ತಂದೆ / ಗಂಡನ ಹೆಸರು | - | ಶ್ರೀಧರ್ ನಾಯರ್ |
| ವಯಸ್ಸು | - | 53 |
| ಉದ್ಯೋಗ | - | ಪಿಎಸ್ಐ, ಬಡಾವಣೆ ಪೊಲೀಸ್ ಠಾಣೆ, ದಾವಣಗೆರೆ |
| ವಾಸ ಸ್ಥಳ | - | ದಾವಣಗೆರೆ |

ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

ನಾನು ದಿಃ 08-06-2023 ರಿಂದ 08-03-2024 ರವರೆಗೆ ಈ ಹಿಂದೆ ಹಾಗೂ ಈಗ ಬಡಾವಣೆ ಪೊಲೀಸ್ ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣದಲ್ಲಿ ದಿಃ 02-01-2024 ರಂದು ಸಂಜೆ 7-20 ಗಂಟೆಗೆ ನಾನು ಠಾಣೆಯಲ್ಲಿ ಇರುವಾಗ ಫ್ರಾ.ಸಾ.1 ರವರು ಠಾಣೆಗೆ ಆಗಮಿಸಿ ನೀಡಿದ ಗಣಕೀಕೃತ ದೂರನ್ನು ಸ್ವೀಕರಿಸಿ ಠಾಣಾ ಗುನ್ನ ನಂ.1/2024 ರಂತೆ ಪ್ರಕರಣವನ್ನು ದಾಖಲಿಸಿಕೊಂಡು ಪ್ರ.ವ.ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೂ ಹಾಗೂ ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ. ದೂರು ಈಗಾಗಲೆ ನಿ.ಪಿ.1 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.1(ಬಿ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ನಿ.ಪಿ.17 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.17(ಎ) ಎಂದು ಗುರುತಿಸಲಾಯಿತು.

ನಂತರ ಮರುದಿನ ಘಟನಾ ಸ್ಥಳಕ್ಕೆ ಭೇಟಿಕೊಟ್ಟು ಆ ಪೂರ್ವದಲ್ಲಿ ಚಾ.ಸಾ.3 ಮತ್ತು 4 ರವರಿಗೆ ನೋಟೀಸು ನೀಡಿ ಅವರನ್ನು ಘಟನಾ ಸ್ಥಳಕ್ಕೆ ಬರಮಾಡಿಕೊಂಡು ಫ್ರಾ.ಸಾ.1 ರವರು ತೋರಿಸಿದ ಸ್ಥಳದಲ್ಲಿ ನಿ.ಪಿ.2 ರಂತೆ ಪಂಚನಾಮೆಯನ್ನು ಬರೆದು, ನಿ.ಪಿ.3 ರಿಂದ 7 ರಂತೆ ಪೋಟೋಗಳನ್ನು ತೆಗೆದಿರುತ್ತೇನೆ. ಅಲ್ಲದೇ ಆ ಸಮಯದಲ್ಲಿ ಫ್ರಾ.ಸಾ.1 ರವರು ಹಾಜರುಪಡಿಸಿದ ಮು.ಮಾ.1 ಮತ್ತು 3 ನ್ನು ಜಪ್ತುಪಡಿಸಿ ಅವುಗಳನ್ನು ಮು.ಮಾ.2 ಮತ್ತು 4 ರಲ್ಲಿ ಇಟ್ಟು ಅರಗು ಸೀಲು ಹಾಕಿ ನನ್ನ ಮತ್ತು ಪಂಚ ಸಾಕ್ಷಿದಾರರ ಸಹಿಯುಳ್ಳ ಚೀಟಿಯನ್ನು ಅವುಗಳಿಗೆ ಅಂಟಿಸಿರುತ್ತೇನೆ. ಸಾಕ್ಷಿಯು ಮು.ಮಾ.1 ಮತ್ತು 3 ನ್ನು ನೋಡಿ ಗುರುತಿಸಿರುವುದಲ್ಲದೇ, ಮು.ಮಾ.2 ಮತ್ತು 4 ರ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ.2(ಎ) ಮತ್ತು 4(ಎ) ಎಂದು ಗುರುತಿಸಲಾಯಿತು. ಅಲ್ಲದೇ ಪಂಚ ಸಾಕ್ಷಿದಾರರಿಗೆ ನೀಡಿದ ಎರಡು ನೋಟೀಸುಗಳನ್ನು ಕ್ರಮವಾಗಿ ನಿ.ಪಿ.18 ಮತ್ತು 19 ಎಂದು, ಅವುಗಳಲ್ಲಿ ಇರುವ ಸಾಕ್ಷಿಯ ಸಹಿಗಳನ್ನು ನಿ.ಪಿ.18(ಎ) ಮತ್ತು 19(ಎ) ಎಂದು ಗುರುತಿಸಲಾಯಿತು. ಅಲ್ಲದೇ ಮುದ್ದೆಮಾಲುಗಳನ್ನು ಮಾಲುಪಟ್ಟಿಗೆ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ಅಲ್ಲದೇ ಆ ಸಮಯದಲ್ಲಿ ಫ್ರಾ.ಸಾ.3 ರಿಂದ 6 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ಅವರುಗಳು ಕ್ರಮವಾಗಿ ನಿ.ಪಿ.10 ರಿಂದ 13 ರಂತೆ ನನ್ನ ಸಮಕ್ಷಮ ಹೇಳಿಕೆಗಳನ್ನು ನೀಡಿರುತ್ತಾರೆ. ಅದೇ ದಿನ ಚಾ.ಸಾ.12 ರವರು ಪೋಟೋಗಳನ್ನು ತೆಗೆದ ಕುರಿತಾಗಿ ನಿ.ಪಿ.16 ರಂತೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅಲ್ಲದೇ ಸಿಡಿಯನ್ನು ಕೂಡ ನೀಡಿರುತ್ತಾರೆ. ಸದರಿ ಸಿಡಿಯನ್ನು ನಿ.ಪಿ.20 ಎಂದು ಗುರುತಿಸಲಾಯಿತು. ಅಲ್ಲದೇ ನಿ.ಪಿ.16 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.16(ಬಿ) ಎಂದು ಗುರುತಿಸಲಾಯಿತು.

ಅಲ್ಲದೇ ಫ್ರಾ.ಸಾ.1 ರವರ 164 ಸಿಆರ್ ಪಿಸಿ ಹೇಳಿಕೆಯನ್ನು ದಾಖಲಿಸಿಕೊಳ್ಳುವಂತೆ ನ್ಯಾಯಾಲಯಕ್ಕೆ ನಿವೇದನೆಯನ್ನು ಸಲ್ಲಿಸಿರುತ್ತೇನೆ. ಸದರಿ ನಿವೇದನೆಯನ್ನು ನಿ.ಪಿ.21 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.21(ಎ) ಎಂದು ಗುರುತಿಸಲಾಯಿತು. ಅಲ್ಲದೇ ಸದರಿ ಹೇಳಿಕೆಯನ್ನು ದಾಖಲಿಸಿಕೊಂಡ ಬಳಿಕ ಅದರ ಪ್ರತಿಯನ್ನು ಕೂಡ ಪಡೆದುಕೊಂಡಿರುತ್ತೇನೆ. ಅಲ್ಲದೇ ವಶಪಡಿಸಿಕೊಂಡ ಮು.ಮಾ.1 ಮತ್ತು 3 ನ್ನು ಸಿಬ್ಬಂದಿಯೊಂದಿಗೆ ರಾಸಾಯನಿಕ ವಿಶ್ಲೇಷಣೆಗಾಗಿ ಕಳುಹಿಸಿಕೊಟ್ಟು ಆ ಕುರಿತು ಸ್ವೀಕೃತಿಯನ್ನು ಪಡೆದುಕೊಂಡಿರುತ್ತೇನೆ. ಸದರಿ ಸ್ವೀಕೃತಿಯನ್ನು ನಿ.ಪಿ.22 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.22(ಎ) ಎಂದು ಗುರುತಿಸಲಾಯಿತು.

ಅಲ್ಲದೇ ಚಾ.ಸಾ.9 ರವರಿಂದ ಫ್ರಾ,ಸಾ.1 ಮತ್ತು 2 ರವರ ಗಾಯಾಳುವಿನ ಗಾಯದ ಪ್ರಮಾಣ ಪತ್ರಗಳನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿ.ಪಿ.23 ಮತ್ತು 24 ಎಂದು ಹಾಗೂ ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿ.ಪಿ.23(ಎ) ಮತ್ತು 24(ಎ) ಎಂದು ಗುರುತಿಸಲಾಯಿತು. ಅಲ್ಲದೇ ರಾಸಾಯನಿಕ ವಿಶ್ಲೇಷಣಾ ವರದಿಯನ್ನು ಕೂಡ ಪಡೆದುಕೊಂಡಿರುತ್ತೇನೆ. ಸದರಿ ರಾಸಾಯನಿಕ ವಿಶ್ಲೇಷಣಾ ವರದಿ ಹಾಗೂ ಮಾದರಿ ಸೀಲುಗಳು ಈಗಾಗಲೇ ನಿ.ಪಿ.14 ಮತ್ತು 15 ಎಂದು ಗುರುತಿಸಲಾಗಿದ್ದು, ನಿ.ಪಿ.14 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.14(ಎ) ಎಂದು ಗುರುತಿಸಲಾಯಿತು. ಅಲ್ಲದೇ ರಾಸಾಯನಿಕ ವಿಶ್ಲೇಷಣಾ ವರದಿಯನ್ನು ಹಾಗೂ ಮು.ಮಾ.1 ನ್ನು ಚಾ.ಸಾ.9 ರವರ ಸಮಕ್ಷಮ ಹಾಜರುಪಡಿಸಿ ಅವರಿಂದ ಅಂತಿಮ ಅಭಿಪ್ರಾಯ ಕೋರಿ ಮನವಿ ಸಲ್ಲಿಸಿದ್ದು, ಅವರು ಪರಿಶೀಲಿಸಿ ತಮ್ಮ ಅಭಿಪ್ರಾಯ ನೀಡಿರುತ್ತಾರೆ. ಸದರಿ ಮನವಿ ಹಾಗೂ ಅಂತಿಮ ಅಭಿಪ್ರಾಯವನ್ನು ನಿ.ಪಿ.25 ಮತ್ತು 26 ಎಂದು ಹಾಗೂ ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿ.ಪಿ.25(ಎ) ಮತ್ತು 26(ಎ) ಎಂದು ಗುರುತಿಸಲಾಯಿತು.

ಅಲ್ಲದೇ ಘಟನಾ ಸ್ಥಳದ ಖಾತಾ ಉತಾರಗಳನ್ನು ಮಹಾನಗರ ಪಾಲಿಕೆಯಿಂದ ಪಡೆದುಕೊಂಡಿರುತ್ತೇನೆ. ಅವರು ನೀಡಿದ ಕವಚ ಪತ್ರ ಮತ್ತು ಖಾತಾ ಉತಾರಗಳನ್ನು ಕ್ರಮವಾಗಿ ನಿ.ಪಿ.27 ಮತ್ತು 28 ಎಂದು ಹಾಗೂ ನಿ.ಪಿ.27 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.27(ಎ) ಎಂದು ಗುರುತಿಸಲಾಯಿತು. ಅಲ್ಲದೇ ಫ್ರಾ.ಸಾ.1 ಮತ್ತು 2 ರವರ ರಕ್ತದ ಗುಂಪಿನ ದಾಖಲೆ ಕೂಡ ಪಡೆದುಕೊಂಡಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿ.ಪಿ.29 ಮತ್ತು 30 ಎಂದು ಹಾಗೂ ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿ.ಪಿ.29(ಎ) ಮತ್ತು 30(ಎ) ಎಂದು ಗುರುತಿಸಲಾಯಿತು.

ಅಲ್ಲದೇ ದಿಃ 02-01-2024 ರಂದು ಆರೋಪಿಯನ್ನು ಪತ್ತೆ ಹಚ್ಚಿ ಬರುವಂತೆ ಚಾ.ಸಾ.13 ಮತ್ತು 14 ರವರಿಗೆ ಆದೇಶ ಮಾಡಿದ್ದು, ಅವರು ಆರೋಪಿಯನ್ನು ವಶಕ್ಕೆ ಪಡೆದು ನನ್ನ ಸಮಕ್ಷಮ ವರದಿಯೊಂದಿಗೆ

ಹಾಜರುಪಡಿಸಿರುತ್ತಾರೆ. ಸದರಿ ಜ್ಞಾಪನ ಮತ್ತು ವರದಿಯನ್ನು ಕ್ರಮವಾಗಿ ನಿ.ಪಿ.31 ಮತ್ತು 32 ಎಂದು ಹಾಗೂ ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿ.ಪಿ.31(ಎ) ಮತ್ತು 32(ಎ) ಎಂದು ಗುರುತಿಸಲಾಯಿತು. ಆ ಕುರಿತು ಚಾ.ಸಾ.13 ಮತ್ತು 14 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ಅಲ್ಲದೇ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ದಸ್ತಗಿರಿ ಮಾಡಿ ಆತನ ಹೇಳಿಕೆಯನ್ನು ದಾಖಲಿಸಿಕೊಂಡು ವೈದ್ಯಕೀಯ ತಪಾಸಣೆ ಆದ ಬಳಿಕ ಆತನನ್ನು ನ್ಯಾಯಾಲಯಕ್ಕೆ ರಿಮಾಂಡ್ ವರದಿಯೊಂದಿಗೆ ಹಾಜರುಪಡಿಸಿರುತ್ತೇನೆ. ನಂತರ ತನಿಖೆ ಪೂರ್ಣಗೊಂಡಿದ್ದು, ಆರೋಪಿಯ ವಿರುದ್ಧ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದ.**

ದೂರುದಾರರ ಮನೆಯಿಂದ ಪೊಲೀಸ್ ಠಾಣೆಯು ಒಂದು ಕಿಮೀ ಅಂತರದಲ್ಲಿ ಇರುತ್ತದೆ ಎಂದರೆ ಸರಿ. ದೂರುದಾರರು ದೂರನ್ನು ದಾಖಲಿಸಲು ಆರು ಗಂಟೆಗಳ ವಿಳಂಬವಿದೆ ಎಂದರೆ ಸರಿ. ಸದರಿ ವಿಳಂಬದ ಕುರಿತು ನಾನು ಪೂರಕ ತನಿಖೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಆ ಕುರಿತಾಗಿ ಪೂರಕ ತನಿಖೆ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.2 ಪಂಚನಾಮೆ ಬರೆಯಲು ಒಂದು ದಿನದ ವಿಳಂಬ ಇದೆ ಎಂದರೆ ಸರಿ. ಆ ರೀತಿ ವಿಳಂಬ ಆದ ಕುರಿತು ಸಮರ್ಪಕ ಮಾಹಿತಿ ನ್ಯಾಯಾಲಯಕ್ಕೆ ನೀಡಿಲ್ಲ ಎಂದರೆ ಸಾಕ್ಷಿಯು ಸದರಿ ಮನೆಯಲ್ಲಿ ವಯಸ್ಸಾದ ವ್ಯಕ್ತಿಗಳು ಇದ್ದ ಕಾರಣ ಮರುದಿನ ಹೋಗಿರುವುದಾಗಿ ನುಡಿದಿರುತ್ತಾರೆ. ನಿ.ಪಿ.16 ರಲ್ಲಿ ಕಲಂ.65 ಬಿ ಪ್ರಮಾಣ ಪತ್ರಕ್ಕೆ ಪೂರಕವಾಗಿ ಇರಬೇಕಾದಂತಹ ಮಾಹಿತಿಗಳನ್ನು ಸಮರ್ಪಕವಾಗಿ ಚಾ.ಸಾ.11 ರವರು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ನಿ.ಪಿ.16 ರಲ್ಲಿ ಚಾ.ಸಾ.11 ರವರು ಹ್ಯಾಶ್ ವ್ಯಾಲ್ಯೂ, ಮೆಟಾ ಡೇಟಾಗಳನ್ನು ತೋರಿಸಿರುವುದಿಲ್ಲ ಎಂದರೆ ಸರಿ. ನಾನು ಮು.ಮಾ.1 ಮತ್ತು 3 ನ್ನು ವಶಕ್ಕೆ ಪಡೆದುಕೊಂಡ ಬಳಿಕದಿಂದ ಅವುಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಕಳುಹಿಸಿದ ಕುರಿತಾಗಿ ಹಾಗೂ ತದನಂತರ ವೈದ್ಯರ ಸಮಕ್ಷಮ ಅವುಗಳನ್ನು ಹಾಜರುಪಡಿಸಿ ಅಂತಿಮ ಅಭಿಪ್ರಾಯ ಪಡೆದುಕೊಳ್ಳುವವರೆಗಿನ ಚೈನ್ ಆಫ್ ಕಸ್ಟಡಿ ಫಾರ್ಮ್ ಅನ್ನು ನ್ಯಾಯಾಲಯಕ್ಕೆ ದೋಷರೋಪಣಾ ಪಟ್ಟಿಯ ಜೊತೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

ನಿ.ಪಿ.1 ದೂರಿನಲ್ಲಿ ಆರೋಪಿಯು ತನ್ನ ಬಲಕಣ್ಣಿಗೆ ಮುಷ್ಟಿಯಿಂದ ಹಲ್ಲೆ ಹಲ್ಲೆ ಮಾಡಿದ್ದಾನೆ ಎಂದು ಹೇಳಿರುವುದಿಲ್ಲ ಎಂದರೆ ಸಾಕ್ಷಿಯು ಮುಂದುವರೆದ ಹೇಳಿಕೆಯಲ್ಲಿ ಹೇಳಿದ್ದಾರೆ ಎಂದು ನುಡಿದಿರುತ್ತಾರೆ. ನಂತರ ನಿ.ಪಿ.1 ದೂರಿನಲ್ಲಿ ಆರೋಪಿಯು ಮು.ಮಾ.1 ರಿಂದ ತನ್ನ ಎಡ ಸೊಂಟಕ್ಕೆ ಎರಡು ಬಾರಿ ಹಲ್ಲೆ ಮಾಡಿದ್ದು, ಆ ಕಾರಣ ನನಗೆ ಎರಡು ಗಾಯಗಳಾಗಿದೆ ಎಂದು ತಿಳಿಸಿಲ್ಲ ಎಂದರೆ ಸರಿ. ಫ್ರಾ.ಸಾ.1 ಮತ್ತು 2 ರವರಿಗೆ ಆದಂತಹ ಗಾಯಗಳನ್ನು ನಾನು ನೋಡಿರುತ್ತೇನೆ. ನಿ.ಪಿ.1 ರಲ್ಲಿ ಹೇಳಿಕೊಂಡಿರುವ ಗಾಯಗಳಿಗೂ, ನಿ.ಪಿ.23 ಮತ್ತು 24 ರಲ್ಲಿ ಹೇಳಿಕೊಂಡಿರುವ ಗಾಯಗಳಿಗೂ ವ್ಯತ್ಯಾಸವಿದೆ ಎಂದರೆ ಸರಿಯಲ್ಲ. ನಾನು ನಿ.ಪಿ.25 ರಲ್ಲಿ ಮು.ಮಾ.1 ರಿಂದ ಹಲ್ಲೆ ಮಾಡಿದಾಗ ಸಾವು ಸಂಭವಿಸಬಹುದೇ ಎನ್ನುವ ಕುರಿತಾಗಿ ಅಭಿಪ್ರಾಯ ಕೋರಿಕೊಂಡಿಲ್ಲ ಎಂದರೆ ಸಾಕ್ಷಿಯು ಗಾಯಗಳು ಸಂಭವಿಸಬಹುದೇ ಎಂದು ಕೋರಿಕೊಂಡಿದ್ದೇನೆ ಎಂದು ನುಡಿದಿರುತ್ತಾರೆ. ನಾನು ಕಠಿಣವಾಗಿ, ನಿಯಮಾನುಸಾರವಾಗಿ ತನಿಖೆ ಮಾಡಿದ್ದಲ್ಲಿ ಈ ಪ್ರಕರಣ ಸುಳ್ಳು ಎಂದು ನನ್ನ ಗಮನಕ್ಕೆ ಬರುತ್ತಿತ್ತು

ಮತ್ತು ನಾನು ಆರೋಪಿಯ ವಿರುದ್ಧ ದೋಷರೋಪಣಾ ಪಟ್ಟಿ ಸಲ್ಲಿಸುವ ಪ್ರಮೇಯ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.